ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್-12/2023 (ಭಾಗ-2) ದಿನಾಂಕ: 05-08-2023

## ಮೊದಲನೇ ಸುತ್ತಿನ ಸೀಟು ಹಂಚಿಕೆ ವೇಳಾಪಟ್ಟಿ

ಯುಜಿಸಿಇಟಿ-2023 ಮತ್ತು ಯುಜಿನೀಟ್-2023 ಕೋರ್ಸುಗಳಿಗೆ ಸಂಯೋಜಿತವಾಗಿ (ಏಕಕಾಲದಲ್ಲಿ) Options ಗಳನ್ನು ದಾಖಲಿಸುವುದು ಮತ್ತು ಸೀಟು ಹಂಚಿಕೆ

ಕೋರ್ಸುಗಳು – ವೈದ್ಯಕೀಯ, ದಂತವೈದ್ಯಕೀಯ, ಇಂಜಿನಿಯರಿಂಗ್, ಆರ್ಕಿಟೆಕ್ಚರ್, ವೆಟರಿನರಿ, ಬಿ.ಫಾರ್ಮ, ಫಾರ್ಮ-ಡಿ, ಕೃಷಿ ವಿಜ್ಞಾನ ಕೋರ್ಸುಗಳು [ಬಿ.ಎಸ್‌ಸಿ. (ಆನರ್ಸ್) ಕೃಷಿ ವಿಜ್ಞಾನ, ಅರಣ್ಯ ವಿಜ್ಞಾನ, ರೇಷ್ಮೆ ಕೃಷಿ ಮುಂತಾದ], ಇತ್ಯಾದಿ

ಇಂಜಿನಿಯರಿಂಗ್, ಆರ್ಕಿಟೆಕ್ಚರ್ ಕೋರ್ಸುಗಳಿಗೆ ದಿನಾಂಕ 04-08-2023 ರಂದು ಸರ್ಕಾರವು ಪರಿಷ್ಕೃತ ಸೀಟ್ ಮ್ಯಾಟ್ರಿಕ್ಸ್ ಅನ್ನು ನೀಡಿರುತ್ತದೆ. ಸದರಿ ಸೀಟ್ ಮ್ಯಾಟ್ರಿಕ್ಸ್ ಅನ್ನು ವೈದ್ಯಕೀಯ, ದಂತವೈದ್ಯಕೀಯ, ವೆಟರಿನರಿ, ಕೃಷಿ ವಿಜ್ಞಾನ ಕೋರ್ಸುಗಳು (ಕೃಷಿ ವಿಜ್ಞಾನ ಅರಣ್ಯ ವಿಜ್ಞಾನ, ರೇಷ್ಮೆಕೃಷಿ ಮುಂತಾದ), ಬಿ.ಫಾರ್ಮ, ಫಾರ್ಮ-ಡಿ, ಕೋರ್ಸುಗಳ ಸೀಟ್ ಮ್ಯಾಟ್ರಿಕ್ಸ್‌ನೊಂದಿಗೆ ಮತ್ತು ಶುಲ್ಕದ ವಿವರಗಳೊಂದಿಗೆ ಪ್ರಾಧಿಕಾರದ ವೆಬ್‌ಸೈಟನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ. ಒಂದಕ್ಕಿಂತ ಹೆಚ್ಚು Discipline ಗಳಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ತಮಗೆ ಆಸಕ್ತಿ ಇರುವ ಎಲ್ಲಾ ಕೋರ್ಸುಗಳಿಗೆ ಆದ್ಯತಾ ಕ್ರಮದಲ್ಲಿ ಇಚ್ಛೆಗಳನ್ನು (Options) ಒಂದೇ ಪೋರ್ಟಲ್‌ನಲ್ಲಿ ದಾಖಲಿಸಬೇಕು. ಅಂದರೆ ವೈದ್ಯಕೀಯ / ದಂತವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕೋರ್ಸುಗಳಿಗೆ ಅರ್ಹತೆ ಪಡೆದಿದ್ದಲ್ಲಿ, ವೈದ್ಯಕೀಯ / ದಂತವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕೋರ್ಸುಗಳಿಗೆ ಇಚ್ಛೆಗಳನ್ನು (Options) ದಾಖಲಿಸಬೇಕು. ಅದೇ ರೀತಿ ವೈದ್ಯಕೀಯ / ದಂತವೈದ್ಯಕೀಯ, ಇಂಜಿನಿಯರಿಂಗ್, ಫಾರ್ಮ್ ಸೈನ್ಸ್, ವೆಟರಿನರಿ, ನರ್ಸಿಂಗ್ ಮುಂತಾದ ಕೋರ್ಸುಗಳಿಗೆ ಅರ್ಹತೆ ಪಡೆದಿದ್ದಲ್ಲಿ ಆಸಕ್ತಿ ಇರುವ ಎಲ್ಲಾ ಕೋರ್ಸುಗಳಿಗೂ ಇಚ್ಛೆಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಬೇಕು. ವಿವಿಧ Discipline ಗಳಿಗೆ ಇಚ್ಛೆಗಳನ್ನು (Options) ಏಕಕಾಲದಲ್ಲಿ ದಾಖಲಿಸುವ ಬಗ್ಗೆ ವಿವರವಾದ ಮಾಹಿತಿಯನ್ನು ಒಳಗೊಂಡ ವಿಡಿಯೋ ಚಿತ್ರಣವನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ 04-08-2023 ರಂದು ಪ್ರಕಟಿಸಲಾಗಿರುತ್ತದೆ.

ವಿವಿಧ ಕೋರ್ಸುಗಳಿಗೆ ಕಾಲ ಕಾಲಕ್ಕೆ ಸರ್ಕಾರವು ನೀಡುವ (01-08-2023, 04-08-2023) ಸೀಟ್ ಮ್ಯಾಟ್ರಿಕ್ಸ್ ಅನ್ನು ಆಧರಿಸಿ ಮತ್ತು ಅಭ್ಯರ್ಥಿಗಳು ನಮೂದಿಸಿದ ಇಚ್ಛೆಗಳನ್ನು ಪರಿಗಣಿಸಿ ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ಸೀಟು ಹಂಚಿಕೆಯನ್ನು ಮಾಡಲಾಗುತ್ತದೆ.

ಆಯುರ್ವೇದ, ಯುನಾನಿ, ಹೋಮಿಯೋಪತಿ, ಯೋಗ ಮತ್ತು ನ್ಯಾಚುರೋಪತಿ ಹಾಗು ಬಿ.ಎಸ್.ಸಿ (ನರ್ಸಿಂಗ್) ಕೋರ್ಸುಗಳ ಸೀಟುಗಳನ್ನು ಸರ್ಕಾರದಿಂದ ಸೀಟ್ ಮ್ಯಾಟ್ರಿಕ್ಸ್ ನೀಡಿದ ನಂತರ ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಲಭ್ಯ ಪಡಿಸುವ ಸಾಧ್ಯತೆ ಇರುತ್ತದೆ.

2

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in

| ಏಕಕಾಲದಲ್ಲಿ Options ಗಳನ್ನು ದಾಖಲಿಸುವುದು ಮತ್ತು ಸೀಟು ಹಂಚಿಕೆಯ ವೇಳಾಪಟ್ಟಿ – ಯುಜಿಸಿಇಟಿ–2023 ಮತ್ತು ಯುಜಿನೀಟ್ 2023<br>**Combined Option entry and seat allotment schedule for UGCET-2023 and UGNEET-2023** | | |
|---|---|---|
| 1. | Display of Seat Matrix and Fee Structure for Medical, Dental, Engineering, Architecture, Veterinary, Agriculture etc courses<br>ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳ ಪ್ರಕಟಣೆ – ವೈದ್ಯಕೀಯ / ದಂತವೈದ್ಯಕೀಯ ಇಂಜಿನಿಯರಿಂಗ್, ವೆಟರಿನರಿ, ಕೃಷಿ ವಿಜ್ಞಾನ ಮುಂತಾದ ಕೋರ್ಸುಗಳು | 06-08-2023 after 7.00 am |
| 2. | Combined Option Entry by eligible candidates for all the courses to which the candidate is eligible (in the order of preference)<br>ಅಭ್ಯರ್ಥಿಯು ಅರ್ಹತೆ ಪಡೆದಿರುವ ಎಲ್ಲಾ ಕೋರ್ಸುಗಳಿಗೆ ಸಂಯೋಜಿತವಾಗಿ ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. (ಆದ್ಯತಾ ಕ್ರಮದಲ್ಲಿ) | From 7.00 am on 06-08-2023 to 09-08-2023 up to 10.00 am |
| 3. | Publication of Mock Allotment Results<br>ಅಣುಕು ಸೀಟು ಹಂಚಿಕೆಯ ಫಲಿತಾಂಶ | 11-08-2023 after 6.00 pm |
| 4. | Provision to change option entry by eligible candidates (add / alter / rearrange / delete the options)<br>ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಸೇರಿಸಿ / ಅಳಿಸಿ / ಬದಲಾಯಿಸಿ/ ಮಾರ್ಪಡಿಸಿ) | From 08.00 pm on 11-08-2023 to 14-08-2023 up to 11.00 am |
| 5. | Publication of first round allotment Result<br>ಮೊದಲನೇ ಸುತ್ತಿನ ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | 16-08-2023 after 6.00 pm |

For activities / availability of seats during counseling:

All candidates are directed to visit the website of KEA http://kea.kar.nic.in at least twice every day for updates. KEA shall not be responsible for any action / consequence/s resulting due to non-diligent follow up of notices, notifications and publications appearing on the KEA website about seat allotment.

- ನಿಗದಿಪಡಿಸಿರುವ ಶೈಕ್ಷಣಿಕೆ ಅರ್ಹತೆ / ಕಾಲೇಜುಗಳ ಪ್ರವೇಶ / ಸೀಟು ಹಂಚಿಕೆ ಇತ್ಯಾದಿಗಳು NMC, DCI, AICTE, COA, NCISM, NCH, PCI, ಸರ್ಕಾರ, ಸಂಬಂಧಿಸಿದ ವಿಶ್ವವಿದ್ಯಾಲಯಗಳು, ಅಪೆಕ್ಸ್ ಸಂಸ್ಥೆಗಳು ಕಾಲ ಕಾಲಕ್ಕೆ ನಿಗದಿಡಿಸುವ ನಿಯಮಗಳಿಗೆ / ಅನುಮೋದನೆಗೆ / ಷರತ್ತಿಗೆ ಒಳಪಟ್ಟಿರುತ್ತವೆ;
- Academic Eligibility / admissions to Colleges/ Seat Allotments made shall be subject to rules /conditions specified from time to time / approval by NMC, DCI, AICTE, COA, NCISM, NCH, PCI, Government, Concerned University, Apex Bodies, etc.
- ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿದ ಅರ್ಹತಾ ಮಾನದಂಡಗಳನ್ನು ಅಥವಾ ನಿಬಂಧನೆಗಳನ್ನು ಪೂರೈಸದ ಅಭ್ಯರ್ಥಿಯ ಪ್ರವೇಶವನ್ನು ಯಾವುದೇ ಸಮಯದಲ್ಲಿ ಹಿಂತೆಗೆದುಕೊಳ್ಳುವ ಹಕ್ಕನ್ನು ಕೆಇಎ ಕಾಯ್ದಿರಿಸುತ್ತದೆ.
- KEA will reserves the right to withdraw any such admission made at any point of time which is not fulfilling the eligibility criteria / regulations fixed by the Competent Authority from time to time.
- ಈ ಬಗ್ಗೆ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಮಾಹಿತಿಯನ್ನು ಕಳುಹಿಸಲಾಗುವುದಿಲ್ಲ.
- No individual intimation will be sent to candidates in this regard.

Executive Director,
Karnataka Examinations Authority.